ಬಿಟ್ಟರೆ ದೊಡ್ಡ ಪಲ್ಲಟವೇನೂ ಅವರ ಬದುಕಿನಲ್ಲಿ ನಡೆದಿಲ್ಲ.

ತಮಟೆಯಲ್ಲಿ ಅಪೂರ್ವ ನಾದ ಇದೆ, ತಾಳವೂ ಇದೆ. ತಬಲಾದಲ್ಲಿ ಇರುವ ಬೋಲ್‌ಗಳೂ ಇವೆ. ಧಾರವಾಡದಲ್ಲಿ 2 ವರ್ಷ ಶಾಸ್ತ್ರೀಯವಾಗಿ ತಬಲಾ ಅಭ್ಯಾಸ ಮಾಡಿದ್ದೇನೆ. 'ಆದಿಕರ್ನಾಟಕದವರ ವಾದ್ಯ' ಎಂದೇ ಜನಜನಿತವಾಗಿರುವ ಆದಿವಾದ್ಯ ತಮಟೆಗೆ ಇತ್ತೀಚೆಗಷ್ಟೇ ರಾಷ್ಟ್ರೀಯ ಮನ್ನಣೆ ಸಿಕ್ಕಿದೆ. ತಮಟೆ ವಾದಕ ಮುನಿವೆಂಕಟಪ್ಪ ಅವರಿಗೆ ಮೊದಲ ಬಾರಿಗೆ ಪದ್ಮಶ್ರೀ ಪುರಸ್ಕಾರ ನೀಡಲಾಗಿದೆ. ಆ ಮೂಲಕ ಕರ್ನಾಟಕದ ತಮಟೆ ಕಲೆಗೆ ರಾಷ್ಟ್ರಮನ್ನಣೆ ಸಿಕ್ಕಂತಾಗಿದೆ.

ತಮಟೆ ನನ್ನ ದನಿ. ಖುಷಿ–ದುಃಖಕ್ಕೆ ನನ್ನ ತಮಟೆ ಮಿಡಿಯುತ್ತದೆ. ತಮಟೆಯನ್ನು ಎದೆಗೆ ಬಿಗಿಯಾಗಿ ಅಪ್ಪಿಹಿಡಿದು ನುಡಿಸುತ್ತಿದ್ದರೆ ನನ್ನನ್ನು ಅದು ಯಾವುದೋ ಒಂದು ಹಂತಕ್ಕೆ ತೆಗೆದುಕೊಂಡು ಹೋಗುತ್ತದೆ. ನನ್ನ ಜೀವನದಲ್ಲಿ ನಡೆದ ಒಂದು ಘಟನೆ ಈಗ ಕಹಿ ಎಂದು ಅನ್ನಿಸುತ್ತದೆ. 8ನೇ ತರಗತಿ ಓದುತ್ತಿದ್ದೆ. ನನ್ನ ಗೆಳೆಯನಿಗೆ ತಮಟೆ ಕಲಿಯುವ ಆಸೆ. ಜಾತಿಯಿಂದ ಅವರು ಸವರ್ಣೀಯರು. ಒಂದೆರಡು ದಿನ ಅವರ ಮನೆಗೆ ಹೋಗಿ ಕಲಿಸಿದೆ. ಒಂದು ದಿನ ಅವರ ಅಪ್ಪ, ಕತ್ತು ಹಿಡಿದು ಹೊರಗೆ ತಳ್ಳಿದರು. 'ನೀನು ಮಾದಿಗ, ನಮ್ಮ ಮನೆಗೆ ನಿಮ್ಮ ತಮಟೆ ತರಬಾರದು' ಎಂದು ಜೋರು ಮಾಡಿದರು. ಅದು ಏನು ಎನ್ನುವುದು ನನಗೆ ಆಗ ಗೊತ್ತಿರಲಿಲ್ಲ. ಈಗ ಅದರ ಒಳಸೂಕ್ಷ್ಮಗಳು ಗೊತ್ತಾಗಿ ನೋವೆನಿಸುತ್ತದೆ.

## ಮರೆ ಮರಸಿ ಮೆರೆಸಲು ಶಿಬಿರ

ತಮಟೆಯನ್ನು ಮುಖ್ಯವಾಹಿನಿಗೆ ತರುವುದು ಏಕೆ ಸಾಧ್ಯವಾಗುತ್ತಿಲ್ಲ? ಅಕಡೆಮಿಕ್ ಆಗಿ ಇದನ್ನು ಏಕೆ ಅಭ್ಯಾಸ–ಅಧ್ಯಯನ ಮಾಡುತ್ತಿಲ್ಲ? ತಮಟೆ ಮೂಲೆಗೆ ಸರಿಸಿ ನೋಡುವುದು ಏಕೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ರೂಪದಲ್ಲಿ ತಮಟೆ ಕಲಿಸುವ ಶಿಬಿರ ರೂಪಿಸಿದ್ದೇನೆ. ಹಾರ್ಮೋನಿಯಂ, ತಬಲಕ್ಕೆ ಅಲಂಕೃತ ವೇದಿಕೆ ನೀಡುವಂತೆ ತಮಟೆಗೂ ಕೊಡಬೇಕು. ತಬಲಕ್ಕಿರುವ ಧಿಮಾಕು ದೌಲತ್ತು ತಮಟೆಗೂ ಬೇಕು ಎನ್ನುವುದು ನನ್ನ ಆಶಯ. ಏಳು ದಿನಗಳ ಈ ಶಿಬಿರದಲ್ಲಿ ತಮಟೆಯ ಪರಿಚಯ, ಮೂಲ ಕೌಶಲ್ಯವನ್ನು ಕಲಿಸುತ್ತೇನೆ. ಸಾಧ್ಯವಾದರೆ ನಾಲ್ಕೈದು ತಾಳಗಳ ಪರಿಚಯವನ್ನೂ ಮಾಡುತ್ತೇನೆ. ನಿತ್ಯ ಅಭ್ಯಾಸದಿಂದ ಇದರಲ್ಲಿ ಪ್ರಾವೀಣ್ಯತೆ ಗಳಿಸಬಹುದು.

ತಮಟೆಯನ್ನು ಉಪೇಕ್ಷೆ ಮಾಡಿದ್ದರಿಂದ ಚರ್ಮದ ತಮಟೆ ಕಡಿಮೆ ಆಗಿದೆ. ಚರ್ಮದ ತಮಟೆ ಮರೆಯಾಗುತ್ತಿದೆ. ಅವುಗಳನ್ನು ಮನೆಯಲ್ಲಿ ಇಟ್ಟುಕೊಳ್ಳಲು ಹಿಂಜರಿಯುವ ಪರಿಸ್ಥಿತಿ ಇದೆ. ಸತ್ತಾಗ ನುಡಿಸುವ ವಾದ್ಯ ಎಂಬ ಮೌಢ್ಯ ಇದೆ. ಚರ್ಮದ ತಮಟೆಗಾಗಿ ತುಂಬ ಹುಡುಕಾಟ ಮಾಡಿದ್ದೇನೆ. ಚರ್ಮವನ್ನು ಹದಮಾಡಿ ತಮಟೆ ಮಾಡುವವರ ಪ್ರಮಾಣವೂ ತುಂಬ ಕ್ಷೀಣಿಸಿದೆ. ಕೋಲಾರ, ಮಾಲೂರು, ಚನ್ನಪಟ್ಟಣ, ರಾಯಚೂರು, ಬೆಳಗಾವಿಯ ಹಲವು ಕಡೆ



ತಮಟೆಗಾರರಿಗಾಗಿ ಹುಡುಕಾಡಿದ್ದೇನೆ. ತಮಟೆ ಕಟ್ಟಲು ಚರ್ಮ, ಕಬ್ಬಿಣದ ಬಳೆ ಬೇಕು, ಮುಚ್ಚಿಗೆ ಹಾಕಿ ಚರ್ಮದ ಹುರಿಯಲ್ಲಿ ಬಿಗಿಯಬೇಕು. ಇಬ್ಬರು ಮೂವರ ಕುಶಲಕರ್ಮಿಗಳ ಕೆಲಸವನ್ನು ಅದು ಬಯಸುತ್ತದೆ. ಅಷ್ಟಾದರೂ ಅದರ ಬೆಲೆ ತಯಾರಿಸುವ ಶ್ರಮಕ್ಕೆ ಸಮಾನಾಂತರವಾಗಿಲ್ಲ. ಚರ್ಮ ಹದಮಾಡುವವರು, ತಯಾರಿಸುವವರು ಕಡಿಮೆ ಆಗುತ್ತಿದ್ದಾರೆ. ಇದಕ್ಕೆ ಸಾಮಾನ್ಯವಾಗಿ ದನ, ಕುರಿ, ಮೇಕೆಯ ಚರ್ಮವನ್ನು ಬಳಸುತ್ತಾರೆ. ಈಗ ಫೈಬರ್ ತಮಟೆಗಳು ಹೆಚ್ಚು. ಅದರ ತಯಾರಿಕೆ ಸುಲಭ. ಕಬ್ಬಿಣದ ರಿಂಗಿಗೆ ಫೈಬರ್ ಅಳವಡಿಸಿ ನಟ್ಟು ಬೋಲ್ಟ್ ಹಾಕಿದರೆ ಆಯಿತು. ಚರ್ಮದ ಹಲಗೆಯನ್ನು ಬೆಂಕಿಯ ಝಳಕ್ಕೆ ಹಿಡಿದು ನುಡಿಸಿದಾಗ ಹೊಮ್ಮುವ ರಿಂಗಣ ಫೈಬರ್ ತಮಟೆಯಲ್ಲಿ ಬರುವುದು ಸಾಧ್ಯ ಇಲ್ಲ.

## ರಂಗದಲ್ಲಿ ನಾಯಕನಾದೆ

ರಂಗ ಗೀತೆ ಮತ್ತು ನಾಟಕದಲ್ಲಿ ಔಚಿತ್ಯಕ್ಕೆ ತಮಟೆ ಬಳಸುವುದು ಸಾಮಾನ್ಯ. ದಲಿತ ಕವಿ ಕೆ.ಬಿ. ಸಿದ್ದಯ್ಯ ಅವರ ಬದುಕು, ಬರಹವನ್ನು ಆಧರಿಸಿ 'ದಕ್ಲ ಕಥಾ ದೇವಿ' ರಂಗರೂಪವನ್ನು ಮಾಡಲಾಗಿದೆ. ಅದನ್ನು ಲಕ್ಷ್ಮಣ ಕೆ.ಪಿ. ನಿರ್ದೇಶಿಸಿದ್ದಾರೆ. ಆ ನಾಟಕದಲ್ಲಿ ನಾನೇ ನಾಯಕ. ನನ್ನ ತಮಟೆಯೂ ನಾಯಕನ ಹಮ್ಮಿನಲ್ಲಿ ಮೆರವಣಿಗೆ ಮಾಡಿದೆ. ತಮಟೆಯ ಸಾಂಸ್ಕೃತಿಕ ವೈಭವ ಈ ನಾಟಕದಲ್ಲಿ ಒಂದಿಷ್ಟು ಕಾಣಿಸುತ್ತದೆ.

ತಬಲಾವನ್ನು ಕಟ್ಟಿಕೊಂಡು ಬೀದಿಯಲ್ಲಿ ನುಡಿಸಿದರೆ ಒಂದು ಮನೆಯಿಂದ ಮತ್ತೊಂದು ಮನೆಗೆ ಕೇಳಿಸುವುದು ಕಷ್ಟ. ತಮಟೆಯನ್ನು ಎಲ್ಲೋ ನುಡಿಸುತ್ತಿದ್ದರೆ ಇನ್ನೆಲ್ಲಿಯವರೆಗೋ ಕೇಳಿಸುತ್ತದೆ. ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೂ ಅದರ ಉದ್ದೇಶವನ್ನು ದಾಟಿಸಬಲ್ಲದು. ಅದರ ನಾದವೇ ಸ್ಪಷ್ಟ ಸಂದೇಶವನ್ನು ರವಾನಿಸುತ್ತದೆ. ಆ ನಿಟ್ಟಿನಲ್ಲಿ ತಮಟೆ ನೋವು ನಲಿವನ್ನು ಸಂವಹನ ಮಾಡುತ್ತಲೇ ಇದೆ. ಅದರ ಧ್ವನಿಯನ್ನು ಪ್ರಚುರಪಡಿಸಲು ಮೈಕಿನ ಅಗತ್ಯವಿಲ್ಲ. ಬಾರಿಸುವವನ ಮನೋ ಮಿಡಿತಕ್ಕೆ ದೊಡ್ಡದಾಗಿ ಧ್ವನಿಸಿ ಜನರನ್ನು ಸೇರಿಸುವ ಶಕ್ತಿ ಅದಕ್ಕಿದೆ. ಇದನ್ನು ಬಿಟ್ಟರೆ ಡೊಳ್ಳು, ನಗಾರಿ ಮತ್ತು ಸಮಾಳಕ್ಕೆ ಆ ಅಬ್ಬರ ಇದೆ. ಅವುಗಳನ್ನು ನಿರ್ದಿಷ್ಟ ಸಂದರ್ಭಕ್ಕೆ ಮಾತ್ರ ಬಳಸುತ್ತಾರೆ. ಹಲಗೆಗೆ ಹಲವು ಆಯಾಮ. ಊರ ಹಬ್ಬ, ಡಂಗೂರ, ಸಾಂಸ್ಕೃತಿಕ ಉತ್ಸವ, ಸಂತೆ ಪೇಟೆಯಲ್ಲೂ ಅದು ಪಾಲು ಪಡೆಯುತ್ತದೆ. ಅದರ ಶಬ್ದ ಜನರ ನಾಡಿಬಡಿತವನ್ನು ಬಡಿದೆಚ್ಚರಿಸುತ್ತದೆ. ಹಲಗೆ ತನ್ನ ನಾದಕ್ಕೆ ಒಂದು ಹೆಜ್ಜೆ ಹಾಕಲು ಮನಸನ್ನು ಕುಣಿಸುತ್ತದೆ.

ನಮ್ಮಣ್ಣ ಡಿಂಗ್ರಿ ನರೇಶ್ ರಂಗನಿರ್ದೇಶಕ, ನಟ. ಅವರೂ ತಮಟೆ ನುಡಿಸುತ್ತಾರೆ. ಅವರು ತಮಟೆ ಶಿಬಿರಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಈ ದೇಶದಲ್ಲಿ ಜೀವಂತ ಇರುವ ಅಸಮಾನತೆಯ ನೋವನ್ನು ತಮಟೆ ಬಾರಿಸುವ ಮೂಲಕ ಅರ್ಥ ಮಾಡಿಸುವ ಪ್ರಯತ್ನವನ್ನು ನಮ್ಮ ಪೂರ್ವಿಕರು ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಕೆಲಸ ಮಾಡಬೇಕಿದೆ. 'ಒಂದು ಕಲೆಯನ್ನು ವ್ಯವಸ್ಥಿತವಾಗಿ ಹೇಗೆ ಸಮಾಜ ದಮನ ಮಾಡಿದೆಯೋ ಅದನ್ನು ಮೀರಿ ಅದಕ್ಕೊಂದು ಚಾರಿತ್ರಿಕ ಮಹತ್ವ ನೀಡಬೇಕು. ಅದಕ್ಕೊಂದು ಚರಿತ್ರೆಯನ್ನು ಪುನರ್ ಕಟ್ಟುವ ನಿಟ್ಟಿನಲ್ಲಿ ಕೆಲಸ ಮಾಡಬೇಕು' ಎನ್ನುವ ನನ್ನಣ್ಣನ ಮಾತಿನ ಆಶಯವನ್ನು ನಿಜಗೊಳಿಸುವ ದಾರಿಯಲ್ಲಿ ನಡೆದಿರುವೆ.

ವ್ಯವಸ್ಥಿತವಾಗಿ ಇಂಥವರೇ ನುಡಿಸಬೇಕು, ಇದು ಶ್ರೇಷ್ಠ ಅಲ್ಲ ಎನ್ನುವ ಹುನ್ನಾರ ಶತಮಾನಗಳ ಕಾಲದಿಂದಲೂ ಇದೆ. ತಮಟೆಗಾರ ಬೀದಿಯಲ್ಲಿ ಮೆರವಣಿಗೆ ಮಾಡಬೇಕು. ಪ್ರತಿಷ್ಠಿತ ಸಭಿಕರ ವೇದಿಕೆಗಳಲ್ಲಿ ಬೇರೆ ವಾದ್ಯಗಳ ವಾದಕರಿಗೆ ವೇದಿಕೆ ದೊರೆತರೆ, ತಮಟೆಗೆ ಹಾದಿ ಬೀದಿಯಲ್ಲಿ ವೇದಿಕೆ ನೀಡುತ್ತಾರೆ. ಇದು ಬದಲಾಗಬೇಕು. ಇದು ಬದಲಾವಣೆಯ ಸಮಯ.

ತಮಟೆ ಕಲಿಯಬಯಸುವ ಆಸಕ್ತರು ಭರತ್ ಡಿಂಗ್ರಿ ಅವರನ್ನು ಸಂಪರ್ಕಿಸಬಹುದು. ಫೋನ್: 72596 07639.

ಪ್ರತಿಕ್ರಿಯಿಸಿ: feedback@sudha.co.in

### ತಮಟೆಯ ನುಡಿ

ತಮಟೆ ಉತ್ಸವ ಮೂರ್ತಿಗೂ ಜೀವ ತುಂಬುತ್ತದೆ. ದೇವರು ಹೊತ್ತ ಪಲ್ಲಕ್ಕಿ ಹೆಜ್ಜೆ ಹಾಕಲು ತಮಟೆ 'ಡಂಕಣಕಣ ಡಂಕಣಕ' ಎಂದು ನುಡಿಯಬೇಕು. ವೀರಗಾಸೆಯಲ್ಲಿ 'ಆಹಾ ರುದ್ರ... ಆಹಾ... ವೀರಾ...' ಎನ್ನುವ ಧ್ವನಿಗೆ ಸಮಾಳ ಬಾರಿಸಿದರೆ, ಡೊಳ್ಳು ಢಜಂ ಢಜಂ ಎನ್ನುವ ಶಬ್ದಕ್ಕೆ ಹಾಡು ಪಲ್ಲವಿಸುತ್ತದೆ. ತಮಟೆ ಬಾರಿಸದಿದ್ದರೆ ತೇರು ಎಳೆಯುವುದಿಲ್ಲ. ಹೆಣವೂ ಮೇಲೆ ಏಳಲ್ಲ. ಹಲಗೆ ತನ್ನದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಕಾಪಾಡಿಕೊಂಡಿದೆ. ಅದರ ಉಲ್ಲೇಖ ಕ್ರಿ.ಶ. 9ನೇ ಶತಮಾನದ ಮೊದಲ ಕನ್ನಡ ಉಪಲಬ್ಧ ಗದ್ಯಕೃತಿ 'ವಡ್ಡಾರಾಧನೆ'ಯಲ್ಲಿದೆ. ವಚನ ಚಳವಳಿಯಲ್ಲಿ ತಮಟೆ ಹೆಚ್ಚು ಬಳಕೆಯಾಗಿದೆ. ದೊಡ್ಡಾಟ, ಸಣ್ಣಾಟ, ಬಯಲಾಟಗಳ ಜನಾಕರ್ಷಣೆಯ ಧ್ವನಿವರ್ಧಕ ಎಂದರೆ ತಮಟೆ. ಇದು ಜನರನ್ನು ಸೇರಿಸಲು, ಜನರಿಗೊಂದು ಸಂದೇಶ ಕೊಡಲು ನುಡಿಯುತ್ತದೆ.